(ಸ) ಬನ್ನೂರು ಮಂತ್ತು ತಲಕಾಡಂ ಪ್ರಾಥಮಿಂಕ ಕೇಂದ್ರುಗಳಿಗೆ ಮಂಹಿಳಾ ವೈದ್ಯಾಧಿಕಾರಿಗಳನ್ನು ನೇಮಿಂಸವುದಂ.

ಶ್ರೀ ಕೆ. ಜಿ. ರಾಮಸ್ವಾಮಿ (ಬನ್ನೂರು).—ಮಾನ್ಯ ಸಭಾಧ್ಯಕ್ಷರೆ, ಬನ್ನೂರು ಮತ್ತು ತಲಕಾಡಿ ಪ್ರಾಥಮಿಕ ಆರೋಗ್ಯ ಕೇಂದ್ರುಗಳಲ್ಲಿ ಕಳೆದ ೩-೪ ವರ್ಷಗಳಿಂದ ಮಹಿಳಾ ವೈದ್ಯಾಧಿಕಾರಿಗಳನ್ನು ಹಾಕದೆ ರೋಗಿಗಳಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಕೂಡಲೇ ಮಹಿಳಾ ವೈದ್ಯಾಧಿಕಾರಿಗಳನ್ನು ಬನ್ನೂರು ಮತ್ತು ತಲಕಾಡು ಪ್ರಾಥಮಿಕ ಆರೋಗ್ಯ ಕೇಂದ್ರುಗಳಿಗೆ ಪೋಸ್ಟ್ ಮಾಡಿ ಅನುಕೂಲ ಮಾಡಿ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೆ, ಡಾ: ಉಮಾದೇವಿ ಎಂಬುವವರನ್ನು ಸ್ನಾತಕೋತ್ತರ ವಾಸ್ಯಂಗಕ್ಕೆ ನಿಯೋಜಿಸಿದ್ದರ ಪರಿಣಾಮವಾಗಿ ಮಹಿಳಾ ವೈದ್ಯಾಧಿಕಾರಿಯ ಹುದ್ದೆಯು ತಾ ೭-೧೦-೧೯೮೦ರಿಂದ ಬನ್ನೂರು ಆರೋಗ್ಯ ಘಟಕದಲ್ಲಿ ಖಾಲಿಯಾಗಿದೆ ಡಾ: ನಾರಾಯಣಗೌಡ ಎಂಬುವವರು ಈ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇದಲ್ಲದೆ ಡಾ: ಚನ್ನರಸೇಗೌಡ ಎಂಬುವ ಪುರುಷ ವೈದ್ಯಾಕಾರಿಯೂ ಸಹ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಇಬ್ಬರಲ್ಲಿ ಒಬ್ಬರನ್ನು ವರ್ಗಾಯಿಸಿ ಒಬ್ಬ ಮಹಿಳಾ ವೈದ್ಯರನ್ನು ನೇಮಿಸ ಲಾಗುವುದು

ಪ್ರಾಥಮಿಕ ಆರೋಗ್ಯ ಕೇಂದ್ರ, ತಲಕಾಡು, ಇಲ್ಲಿ ಡಾ॥ ಜೆ. ಎಂ. ಲೀಲಾ ಎಂಬ ಮಹಿಳಾ ವೈದ್ಯಾಧಿಕಾರಿಯು ನಿವೃತ್ತರಾದ ಪರಿಣಾಮವಾಗಿ ಮಹಿಳಾ ವೈದ್ಯಾಧಿಕಾರಿ ಹುದ್ದೆ ಖಾಲಿಯಾಗಿದೆ. ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಕ್ರಮ ಸಂಖ್ಯೆ ಎ-೧೧೮ ಡಾ: ಅನಿಸುರ್ ರೆಹಮಾನ್ ಎಂಬುವವರನ್ನು ಫೆಬ್ರುವರಿ ೮೫ರಲ್ಲಿ ನೇಮಕ ಮಾಡಿ ತಲಕಾಡಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹಾಕಲಾಗಿತ್ತು. ಆದರೆ ಅವರು ಇನ್ನೂ ಕೆಲಸಕ್ಕೆ ಹಾಜರಾಗಿಲ್ಲ.

(6) ಸಂಪಾಜೆ, ಕಾನೂರು, ಬಾಳೆಲೆ, ಮಂರೆ ನಾಡು, ಕರಿಕೆ ಆಸ್ಪತ್ರೆಗಳಿಗೆ ವೈದ್ಯರನ್ನು ನೇಮಿಸಂವುದಂ.

ಶ್ರೀಮತಿ ಸುಮಾ ವಸಂತ (ವಿರಾಜಪೇಟೆ).—ಇವರ ಪರವಾಗಿ ಶ್ರೀ ಮಲ್ಲಾರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಸಂಪಾಜೆ, ಕಾನೂರು, ಬಾಳಲೆ, ಸಿದ್ದಾಪುರ, ಮರೆನಾಡು, ಕರಿಕೆ ಆಸ್ಪತ್ರೆಗಳಿಗೆ ವೈದ್ಯರು ಮತ್ತು ಸಿಬ್ಬಂದಿವರ್ಗದವರ ನೇಮಕಾತಿ ಬಗ್ಗೆ ಸರ್ಕಾರಕ್ಕೆ ಎಷ್ಟು ಅರ್ಜಿಗಳನ್ನು ಕಳುಹಿಸಿದರೂ ಇದುವರೆಗೂ ಸರ್ಕಾರ ಯಾವುದೇ ಕ್ರಮವನ್ನೂ ಕೈಗೊಂಡಿರುವುದಿಲ್ಲ. ಆದಕಾರಣ ಇಲ್ಲಿಯ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಈ ತೊಂದರೆಯನ್ನು ಹೋಗಲಾಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಂತ್ತಿದ್ದೇನೆ.

೩ ಪಿ. ಎಂ.

ಡಾ॥ ಎಚ್, ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಸಚಿವರು).— ರಾಜ್ಯದಲ್ಲಿ ಕುಷ್ಠರೋಗ ದಿಂದ ನರಳುತ್ತಾ ಇರುವವರ ಸಂಖ್ಯೆ ಸುಮಾರು ೨.೨ ಲಕ್ಷ ಇದೆ. ಅಂಗವಿಕಲರುಗಳಿಗೆ ತಲಾ ೫೦ ರೂಪಾಯಿಗಳ ಮಾಶಾಸನವನ್ನು ಸಂಬಂಧಪಟ್ಟ ತಾಲ್ಲೂಕು ತಹಸೀಲ್ದಾರರುಗಳ ಮುಖಾಂತರ ಕೊಡು ತ್ತಿದ್ದೇವೆ. ಗುಣಹೊಂದಿದ ಮತ್ತು ಸ್ವಲ್ಪ ಅಂಗವಿಕಲರುಗಳಾಗಿರತಕ್ಕ ಕುಷ್ಠ ರೋಗಿಗಳಿಗೆ, ಸಂಬಂಧ ಪಟ್ಟ ಸಂಸ್ಥೆಗಳಲ್ಲಿ ಅದ್ಯತೆಯ ಮೇರೆಗೆ ನೌಲ್ಕನೆಯ ದರ್ಜೆಯ ಹುದ್ದೆಗಳಿಗೆ ನೇಮಿಸಿಕೊಳ್ಳಲಾಗುತ್ತಿದೆ. ಸ್ಥಳೀಯ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಸೇರಿದಂತೆ ೧ಳಳ ಮಂದಿ ಗುಣಮುಖರಾದ ಕುಷ್ಠರೋಗಿ ಗಳನ್ನು ಉದ್ಯೋಗ ವಿನಿಮಯ ಕಚೇರಿಯಿಂದ ಮತ್ತು ಉದ್ಯೋಗ ವಿನಿಮಯ ಕಚೇರಿಯ ನೆರವನ್ನು ಅಪೇಕ್ಷಿಸದೆಯೇ ಉದ್ಯೋಗಗಳಿಗೆ ಅವರನ್ನು ನೇಮಿಸಿಕೊಂಡು ಮಾಶಾಸನವನ್ನು ನೀಡಲಾಗಿದೆ. ಅಂಗ ವಿಕಲರು ಮತ್ತು ಕುಷ್ಠ ರೋಗಿಗಳನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಎಲ್ಲಾ ಕುಷ್ಠ ರೋಗಿಗಳಿಗೂ ಅಂದರೆ ಸುಮಾರು ೨.೨ ಲಕ್ಷ ಜನರಿಗೆ ಮಾಶಾಸ್ಸನವನ್ನು ಕೊಡಲು ಸಾಧ್ಯವಾಗದೇ ಇರ ತಕ್ಕಂಥ ಸಂದರ್ಭವಿರುವುದರಿಂದ, ಮಿಕ್ಕ ಏನೇನು ಸೌಲಭ್ಯಗಳನ್ನು ಕೊಡಲಿಕ್ಕೆ ಸಾಧ್ಯವೋ ಆ ಎಲ್ಲಾ ಸೌಲಭ್ಯಗಳನ್ನು ಕೊಡಲು ಸರ್ಕಾರದವರು ಪರಿಶೀಲನೆ ಮಾಡಿ ತೀರ್ಮಾನವನ್ನು ಕೈಗೊಳ್ಳಲಾಗುತ್ತ ದೆಂದು ಹೇಳುತ್ತೇನೆ.